# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 16.12.2010**

## *ಜೆ.ಪಿ. ಪಾರ್ಕ್ ವಾರ್ಡ್‌ನ ಕೊಳಚೆ ಪ್ರದೇಶಗಳಿಗೆ ಮತ್ತು ಪಾಲಿಕೆಯ ಶಾಲೆಗೆ ಉಪ ಮಹಾಪೌರರ ಭೇಟಿ*

ಇಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಶ್ರೀ ಎನ್.ದಯಾನಂದ್ ರವರು ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್-17ರ ಜೆ.ಪಿ. ಪಾರ್ಕ್‌ನಲ್ಲಿರುವ ಪೂರ್ಣಪುರ ಮತ್ತು ಬಿ. ರಾಮಯ್ಯ ಕಾಲೋನಿ ಸ್ಲಂ ಪ್ರದೇಶಗಳಿಗೆ ಹಾಗೂ ಜೆ.ಪಿ. ಉದ್ಯಾನವನಕ್ಕೆ ಮತ್ತು ಮತ್ತಿಕೆರೆಯ ಬಾಲಕಿಯರ ಸಂಯುಕ್ತ ಪದವಿ ಪೂರ್ವ ವಿದ್ಯಾಲಯ, ಅಂಗನವಾಡಿ ಕೇಂದ್ರಕ್ಕೆ ಸ್ಥಳೀಯ ಪಾಲಿಕೆ ಸದಸ್ಯರಾದ ಶ್ರೀ ಬಿ.ಆರ್. ನಂಜುಂಡಪ್ಪರವರೊಂದಿಗೆ ಭೇಟಿ ನೀಡಿ, ತಪಾಸಣೆಯನ್ನು ಕೈಗೊಂಡು ಪರಿಶೀಲಿಸಿದರು.

ಜೆ.ಪಿ. ಪಾರ್ಕ್ ವಾರ್ಡ್‌ನಲ್ಲಿ ಶೇಕಡ 22.75 ರ ಅನುದಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ನಿರ್ಮಿಸುತ್ತಿರುವ ಒಟ್ಟು ಮನೆಗಳು 203. ಅವುಗಳಲ್ಲಿ ಈಗಾಗಲೇ 72 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಇನ್ನೂ 107 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದ್ದರಿಂದ ಇನ್ನುಳಿದ ಮನೆಗಳನ್ನು ಆದಷ್ಟು ಬೇಗನೆ ಪೂರ್ಣಗೊಳಿಸಿ ಫಲಾನುಭವಿಗಳಿಗೆ ನೀಡಬೇಕೆಂದು ಮುಖ್ಯ ಅಭಿಯಂತರರಾದ ಶ್ರೀ ಎಂ.ಜಿ. ಶ್ರೀನಿವಾಸ್ ರವರಿಗೆ ಉಪ ಮಹಾಪೌರರು ತಿಳಿಸಿದರು.

ಪಾಲಿಕೆಯಿಂದ ನೀಡುತ್ತಿರುವ ಈ ಮನೆಗಳನ್ನು ಕೇವಲ ಫಲಾನುಭವಿಗಳೇ ವಾಸ ಮಾಡಬೇಕು. ಒಂದು ವೇಳೆ ಬೇರೆಯವರಿಗೆ ಬಾಡಿಗೆಗೆ ನೀಡಿದ್ದಲ್ಲಿ ಸ್ಥಳೀಯ ಅಧಿಕಾರಿಗಳಿಂದ ಪರಿಶೀಲಿಸಿ, ಬಾಡಿಗೆಗೆ ನೀಡಿರುವುದು ಸಾಬೀತಾದಲ್ಲಿ ಕೂಡಲೇ ಫಲಾನುಭವಿಗಳಿಂದ ಹಕ್ಕು ಪತ್ರಗಳನ್ನು ವಾಪಸ್ಸು ಪಡೆಯಲಾಗುವುದೆಂದು ತಿಳಿಸುತ್ತಾ, ತೀವ್ರವಾದ ಬಡತನದಲ್ಲಿರುವ ಕುಟುಂಬಗಳನ್ನು ಗುರುತಿಸಿ, ಅವರಿಗೆ ಮನೆಗಳನ್ನು ನಿರ್ಮಿಸಿಕೊಟ್ಟು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಿದರು.

ನಂತರ ಮತ್ತಿಕೆರೆಯಲ್ಲಿರುವ ಬಾಲಕಿಯರ ಸಂಯುಕ್ತ ಪದವಿ ಪೂರ್ವ ವಿದ್ಯಾಲಯಕ್ಕೆ ಭೇಟಿ ನೀಡಿ, ಶಾಲಾ ಮಕ್ಕಳ ಶೈಕ್ಷಣಿಕ ವಿದ್ಯಾಭ್ಯಾಸದ ಪ್ರಗತಿಯನ್ನು ಹಾಗೂ ಶಿಕ್ಷಕರು ಬೋಧಿಸುತ್ತಿರುವ ಪಾಠದ ಬಗ್ಗೆ ಪರಿಶೀಲಿಸಿ, ಬೋಧನೆ ಸಮಯದಲ್ಲಿ ಹೆಚ್ಚೆಚ್ಚು ಸೀಮೆಸುಣ್ಣವನ್ನು ಬಳಸಿದರೆ ಮಾತ್ರ ಮಕ್ಕಳಿಗೆ ಪಾಠವು ಪರಿಣಾಮಕಾರಿಯಾಗಿ ಅರ್ಥವಾಗುತ್ತದೆ ಎಂದು ಸಲಹೆ ನೀಡಿದರು. ಮತ್ತು ಶಾಲೆಯ ಕಟ್ಟಡದ ಗೋಡೆಗಳು ಹದಗೆಟ್ಟಿರುವುದರಿಂದ ಕೂಡಲೇ ಕಟ್ಟಡವನ್ನು ನವೀಕರಣಗೊಳಿಸಲು ಕಲ್ಯಾಣ ಅಭಿವೃದ್ಧಿ ಮತ್ತು ಶಿಕ್ಷಣ ಅಭಿವೃದ್ಧಿಯಲ್ಲಿರುವ ಹಣವನ್ನು ಬಳಸಿಕೊಳ್ಳಬೇಕೆಂದು ಅಭಿಯಂತರರಿಗೆ ಸೂಚಿಸಿದರು.

ಮುಂದಿನ ಶೈಕ್ಷಣಿಕ ವರ್ಷದೊಳಗೆ ಶಾಲೆಯ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದಾಗಿ ಭರವಸೆ ನೀಡುತ್ತಾ, ವಿದ್ಯಾರ್ಥಿಗಳ ಉತ್ತಮ ಫಲಿತಾಂಶ ಬರುವಂತೆ ಬೋಧಿಸಬೇಕು. ಇಲ್ಲವಾದರೆ ಸದರಿ ಶಿಕ್ಷಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆಯನ್ನು ನೀಡಿದರು.

ಈ ಸಂದರ್ಭದಲ್ಲಿ ಶ್ರೀ ಕೆ.ಎಂ. ರಾಮಚಂದ್ರನ್, ಅಪರ ಆಯುಕ್ತರು (ರಾಜರಾಜೇಶ್ವರಿನಗರ), ಶ್ರೀ ಮುದ್ದುರಾಜ್, ಕಾರ್ಯಪಾಲಕ ಅಭಿಯಂತರರು (ಯೋಜನೆ), ಶ್ರೀ ನಾರಾಯಣ್, ಕಾರ್ಯಪಾಲಕ ಅಭಿಯಂತರರು (ಯಶವಂತರಪುರ), ಶ್ರೀ ಏಕಾಂತಪ್ಪ, ಸಹಾಯಕ ವಿದ್ಯಾಧಿಕಾರಿ (ಪಶ್ಚಿಮ) ಹಾಗೂ ಸ್ಥಳೀಯ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**